

ನರಸಿಂಹರಾಜು, ದಿನೇಶ್, ಜಯಶ್ರೀ, ಆರ್.ಟಿ.ರಮಾ ಹಾಸ್ಯ ನಾಟಕದಲ್ಲಿ

ಹೆಚ್ಚು ಉತ್ತೇಜನಕಾರಿಯಾಗಿರಲಿಲ್ಲ. ಇಂತಹ ಸಂದಿಗ್ಧ ಸ್ಥಿತಿಯಲ್ಲಿ ಕನ್ನಡ ಕಲಾವಿದ– ತಂತ್ರಜ್ಞರು ಎರಡು ದೋಣಿಗಳಲ್ಲಿ ಸಂಚರಿಸುತ್ತಿದ್ದರು. ಲಭ್ಯವಿದ್ದಾಗ ಚಿತ್ರಗಳಲ್ಲಿ ಕೆಲಸ, ಇಲ್ಲದಿದ್ದಾಗ ನಾಟಕಗಳಲ್ಲಿ ಪಾಲ್ಗೊಳ್ಳುವಿಕೆ ಸಾಗಿತ್ತು. 1960ರ ದಶಕದಲ್ಲೂ ಇದೇ ಸ್ಥಿತಿ ಇತ್ತು. ಕನ್ನಡದ ಕಲಾವಿದರೇ ಒಟ್ಟಾಗಿ ನಾಟಕ ಪ್ರದರ್ಶನ ಏರ್ಪಡಿಸಿ ಅದರಿಂದ ಬಂದ ಹಣದಿಂದ ಕನ್ನಡಚಿತ್ರ (ಇಮ್ಮಡಿ ಪುಲಕೇಶಿ)ತಯಾರಿಸಿದ್ದೂ ಆಯಿತು. ಸರ್ಕಾರದ ಪ್ರೋತ್ಸಾಹ ಹಾಗೂ ಕನ್ನಡಾಭಿಮಾನಿಗಳ ಉತ್ಸಾಹದ ಫಲವಾಗಿ ಕನ್ನಡಚಿತ್ರಗಳ ನಿರ್ಮಾಣ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದ್ದರೆ ವೃತ್ತಿ ನಾಟಕ ಕಂಪನಿಗಳ ಪರಿಸ್ಥಿತಿ ಶೋಚನೀಯವಾಯಿತು. ನೂರಾರು ಕಂಪನಿಗಳು ಕಣ್ಮುಚ್ಚಿದವು, ದೊಡ್ಡ ಕಂಪನಿಗಳ ಪರಿಸ್ಥಿತಿ ಕೂಡ ಬೇರೆಯದಾಗಿರಲಿಲ್ಲ.

ರಜತ ಪರದೆಯಲ್ಲಿ ರಂಜಿಸುತ್ತಿದ್ದ ನಟ– ನಟಿಯರು ಮತ್ತೆ ರಂಗಭೂಮಿಗೆ ಮರಳುವುದು ಕ್ಷೀಣವಾಯಿತು. ಇಂತಹ ಸಮಯದಲ್ಲಿ ಚಿತ್ರ ನಟ– ನಟಿಯರು ನಾಟಕಗಳಲ್ಲಿ ಕಾಣಿಸಿಕೊಳ್ಳುವ ಅವಕಾಶಗಳು ವಿರಳವಾದವು. ಅದೇ ‘ಪ್ರಜಾವಾಣಿ’ ಪತ್ರಿಕಾ ಬಳಗ ಪ್ರವಾಹ ಸಂತ್ರಸ್ತರಿಗೆ ನೆರವಾಗಲು ನಾಡಿನುದ್ದಕ್ಕೂ ಏರ್ಪಡಿಸಿದ ‘ರಸ ಸಂಜೆ’ ಕಾರ್ಯಕ್ರಮಗಳು. ರಕ್ಷಣಾನಿಧಿ ಸಂಗ್ರಹಣೆಗೆ ಏರ್ಪಡಿಸಿದ ಕಲಾವಿದರ ರಾಜ್ಯ ಪ್ರವಾಸ, ಅನೇಕ ಸಹಾಯಾರ್ಥ ಪ್ರದರ್ಶನಗಳು ಕಲಾವಿದರ ಸಂಘದ ಮನರಂಜನಾ ಕಾರ್ಯಕ್ರಮ– ಹೀಗೆ ಹಲವು ಸಂದರ್ಭಗಳಲ್ಲಿ ಪ್ರಸಿದ್ಧ ಚಿತ್ರ ಕಲಾವಿದರು ರಂಗಭೂಮಿಯಲ್ಲಿ ತಮ್ಮ ಪ್ರತಿಭೆ ಪ್ರದರ್ಶಿಸಿದರು.

ಮೂರು ನಾಲ್ಕು ಸಂದರ್ಭಗಳಲ್ಲಿ ರಾಜ್ಯದ ಹಲವು ಪ್ರಮುಖ ನಗರ– ಪಟ್ಟಣಗಳಲ್ಲಿ ನಡೆದ ಇಂತಹ ಕಾರ್ಯಕ್ರಮಗಳಲ್ಲಿ ಕಲಾವಿದರು ಪೂರ್ಣ ನಾಟಕಗಳನ್ನು ಅಭಿನಯಿಸಲಿಲ್ಲ. ವೃತ್ತಿ ನಾಟಕ ಕಂಪನಿಗಳಲ್ಲಿ ರಾತ್ರಿ ಇಡೀ ನಡೆಯುವ ನಾಟಕಗಳೇ ಜಾಸ್ತಿ ಇದ್ದವು. ಬಳಿಕ ಅವು 2–3 ಗಂಟೆಗಳಿಗೆ ಇಳಿದಿದ್ದವು. ಆ ನಾಟಕಗಳ ಆಯ್ದ ದೃಶ್ಯಗಳನ್ನು ಪ್ರದರ್ಶಿಸುವ ಪರಿಪಾಠವನ್ನು ಕಲಾವಿದರು ಇಟ್ಟುಕೊಂಡಿದ್ದರು. ಇದರಲ್ಲಿ ಹೆಚ್ಚು ಅಭಿನಯಿಸಲ್ಪಟ್ಟಿದ್ದು ‘ಎಚ್ಚಮನಾಯಕ’ ನಾಟಕದ ದೃಶ್ಯ. ಡಾ. ರಾಜ್‌ಕುಮಾರ್, ಎಂ.ಪಿ. ಶಂಕರ್ ಈ ಪಾತ್ರಗಳಲ್ಲಿ ತಮ್ಮ ನಟನಾ ಕೌಶಲ್ಯ ಪ್ರದರ್ಶಿಸಿದ್ದರು.

ವಾದ್ಯಗೋಷ್ಠಿಯೊಂದಿಗೆ ಚಲನಚಿತ್ರ ರಂಗ ಗೀತೆಗಳನ್ನು ಹಾಡಿ ರಂಜಿಸುವುದರೊಂದಿಗೆ ತುಂಬಾ ಸಂಕ್ಷಿಪ್ತ ಕಾಲದಲ್ಲಿ ಪ್ರದರ್ಶಿಸುವ ಹಾಸ್ಯಪ್ರಧಾನ ನಾಟಕಗಳೇ ಇಲ್ಲಿ ಹೆಚ್ಚಿದ್ದವು. ಹಾಸ್ಯ ನಟನೆಗೆ ತಾರಾ ವರ್ಚಸ್ಸು ತಂದುಕೊಟ್ಟ ಟಿ.ಆರ್. ನರಸಿಂಹರಾಜು, ‘ಸದಾರಮೆ’ ನಾಟಕದ ದೃಶ್ಯಗಳು ಆಗ ಬಹಳ ಜನಪ್ರಿಯವಾಗಿದ್ದವು. ಬಾಲಕೃಷ್ಣ, ಶ್ರೀನಾಥ್, ಶಿವರಾಂ, ಕೆ.ಎಸ್. ಅಶ್ವಥ್, ಜಯಂತಿ, ಭಾರತಿ ಮೊದಲಾದವರು ಇಂತಹ ನಾಟಕಗಳ ದೃಶ್ಯಗಳಲ್ಲಿ ಅಭಿನಯಿಸಿ ಜನರನ್ನು ರಂಜಿಸುತ್ತಿದ್ದರು.

ಇದನ್ನು ಹೊರತುಪಡಿಸಿದರೂ ನಾಟಕ– ಸಿನಿಮಾ ಸಂಬಂಧ ಅವಿನಾಭಾವ. ಕನ್ನಡ ಚಲನಚಿತ್ರ ತಯಾರಿಕೆ ಹಿಂಜರಿತ ಕಂಡ ಸಂದರ್ಭಗಳಲ್ಲಿ ಚಿತ್ರ ನಟರು ಕಂಪನಿ ನಾಟಕಗಳಲ್ಲಿ ಅತಿಥಿ ನಟರಾಗಿ ಭಾಗವಹಿಸಿ ಬದುಕಿಗೆ ಆಸರೆ ಪಡೆದುಕೊಂಡಿದ್ದೂ ಇದೆ. ಸುಂದರರಾಜ್, ಪ್ರಮಿಳಾ ಜೋಷಾಯ್, ಡಿಂಗ್ರಿ ನಾಗರಾಜ್, ಹೊನ್ನವಳ್ಳಿ ಕೃಷ್ಣ, ಕರಿಬಸವಯ್ಯ, ಕಲ್ಯಾಣ್ ಕುಮಾರ್, ಉದಯ ಕುಮಾರ್ ಮೊದಲಾದವರು ರಂಗಭೂಮಿಯೊಂದಿಗೆ ಒಡನಾಟ ತಪ್ಪಿಸಿದ್ದೇ ಇಲ್ಲ.



ಹಾಸ್ಯ ನಾಟಕದಲ್ಲಿ ಬಾಲಕೃಷ್ಣ, ಶ್ರೀನಾಥ್, ಬಿ.ವಿ.ರಾಧಾ